ತಾತ್ವಿಕ ಹುಡುಕಾಟಗಳನ್ನು ಬೆಸೆವ ರೀತಿ ಹಾಗೂ ಒಂದರಿಂದ ಮತ್ತೊಂದಕ್ಕೆ ಸಹಜವಾಗಿ ಸಾಗುವ ಆದರ್ಶ ಮಾದರಿಯ ಉದಾಹರಣೆಯೂ ಆಗಿದೆ.

***

ಇಸವಿ 1962, ಸೆಪ್ಟೆಂಬರ್ 8. ಚೀನಾ ಸೇನೆ ಥಗ್ಲಾ ಪರ್ವತ ಶ್ರೇಣಿಗಳ ಮೇಲೆ ದಾಳಿ ಮಾಡಿತು. ಬಿಪಿನ್ ಚಂದ್ರ ಹಾಗೂ ಸಹ ಲೇಖಕರು ಬರೆದ 'ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್' ಪುಸ್ತಕದಿಂದ ಚೀನಾ ದುರಾಕ್ರಮಣದ ವಿವರಗಳ ಸಾರ:

ಮೊದಮೊದಲು ಇದೊಂದು ಸಣ್ಣ ಘಟನೆಯೆಂದು ಭಾರತ ಸರ್ಕಾರ ಭಾವಿಸಿತು. ಪ್ರಧಾನಮಂತ್ರಿ ನೆಹರು ಸಮ್ಮೇಳನವೊಂದಕ್ಕೆ ಲಂಡನ್‌ಗೆ ಹೊರಟರು. ನಂತರ, ಭಾರತಕ್ಕೆ ಮರಳಿ ಬಂದು, ಅಕ್ಟೋಬರ್ 12ರಂದು ಕೊಲಂಬೋಕ್ಕೆ ಹೊರಟರು. ಒಂದು ವಾರದ ನಂತರ ಚೀನಾ ಸೇನೆ NEFA (North East Frontier Agency) ಅಥವಾ ಇಂದಿನ ಅರುಣಾಚಲ ಪ್ರದೇಶದ ಸಿಪಾಯಿದಳಗಳ ಮೇಲೆ ಪ್ರಬಲ ದಾಳಿ ನಡೆಸಿತು. ನೇಫಾದ ಸೇನಾ ಕಮಾಂಡರ್ ಯಾವ ಪ್ರತಿರೋಧದ ಪ್ರಯತ್ನವನ್ನೂ ಮಾಡದೆ ಹಿಂದೆ ಸರಿದುಬಿಟ್ಟರು. ಚೀನಾ ಸೇನೆ ಭಾರತದ ಗಡಿಯೊಳಗೆ ಇನ್ನಷ್ಟು ದೂರ ಸಾಗಿ ಬಂದಿತು. ಗ್ಯಾಲ್ವನ್ ಕಣಿವೆಯಲ್ಲಿ ಚೀನಾ ಸೇನೆ ಹದಿಮೂರು ಠಾಣೆಗಳನ್ನು ವಶಪಡಿಸಿಕೊಂಡಿತು.

ದೇಶದಲ್ಲಿ ಹಾಹಾಕಾರವೆದ್ದಿತು.

ಚೀನಾದ ಈ ನಡೆ ಮಿತ್ರದ್ರೋಹವಾಗಿತ್ತು. ಕಾರಣ, ಭಾರತದ ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಚೀನಾ ಕುರಿತು ಗೆಳೆತನದ ಭಾವನೆಯನ್ನೇ ತೋರುತ್ತಾ ಬಂದಿತ್ತು. ಚೀನಾ ಜಪಾನ್‌ನ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿದ್ದಾಗ ಕಾಂಗ್ರೆಸ್ ಚೀನಾ ಪರವಾಗಿ ಸಹಾನುಭೂತಿ ತೋರುತ್ತಿತ್ತು. 1930ರಲ್ಲಿ ಚೀನಾಕ್ಕೆ ಕಾಂಗ್ರೆಸ್ ಪಕ್ಷ ವೈದ್ಯರ ತಂಡವನ್ನು ಕಳಿಸಿತ್ತು. ಜಪಾನೀಯರು ಚೀನಾವನ್ನು ಆಕ್ರಮಿಸಿರುವುದನ್ನು ಪ್ರತಿಭಟಿಸಿ ಭಾರತದಲ್ಲಿ ಜಪಾನಿ ವಸ್ತುಗಳ ಬಹಿಷ್ಕಾರಕ್ಕೆ ಕಾಂಗ್ರೆಸ್ ಕರೆ ಕೊಟ್ಟಿತ್ತು. 1 ಜನವರಿ 1950ರಂದು ಸ್ಥಾಪನೆಯಾದ ಚೀನಾ ನವ ಗಣರಾಜ್ಯಕ್ಕೆ ಮನ್ನಣೆ ನೀಡಿದ ಮೊದಲ ರಾಷ್ಟ್ರ ಭಾರತವಾಗಿತ್ತು.

ಹೀಗಾಗಿ, ಚೀನಾ ಹಾಗೂ ಭಾರತ ಎರಡೂ ವಸಾಹತುಶಾಹಿಯಡಿಯಲ್ಲಿ ಸಿಕ್ಕು ನರಳಿವೆ; ಎರಡೂ ರಾಷ್ಟ್ರಗಳು ಬಡತನ, ನಿರುದ್ಯೋಗದ ವಿರುದ್ಧ ಹೋರಾಡಲು ಕೈಜೋಡಿಸಿ, ಏಷ್ಯಾಖಂಡಕ್ಕೆ ಜಾಗತಿಕ ಭೂಪಟದಲ್ಲಿ ಸೂಕ್ತ ಸ್ಥಾನ ದೊರಕಿಸಿಕೊಡಬಲ್ಲವು ಎಂದು ನೆಹರು ನಂಬಿದ್ದರು. ವಿಶ್ವಸಂಸ್ಥೆಯ ಭದ್ರತಾಸಭೆಯಲ್ಲಿ ಚೀನಾಕ್ಕೆ ಸ್ಥಾನ ಕೊಡಬೇಕೆಂದು ನೆಹರು ಒತ್ತಾಯಿಸಿದ್ದರು.

ಲೋಹಿಯಾ 1938–39ರ ನಡುವೆ ಭಾರತದ ಇತಿಹಾಸವನ್ನು ನಿಕಟವಾಗಿ ಓದಲು ಶುರು ಮಾಡಿದ ಕಾಲದಿಂದಲೂ ಚೀನಾದ ಉದ್ದೇಶಗಳ ಬಗ್ಗೆ ಸಂದೇಹಿಯಾಗೇ ಇದ್ದರು. 1949ರ ಹೊತ್ತಿಗಾಗಲೇ ಚೀನಾ ಟಿಬೆಟ್‌ನ ಕೆಲವು ಭಾಗಗಳಲ್ಲಿ ಶಸ್ತ್ರಾಸ್ತ್ರಗಳನ್ನು ಜೋಡಿಸಿಡತೊಡಗಿತು. ಇದರ ಮುಂದಿನ ಪರಿಣಾಮಗಳ ಬಗ್ಗೆ ಲೋಹಿಯಾ ಭಾರತವನ್ನು ಎಚ್ಚರಿಸಿದರು. 1950ರಲ್ಲಿ ಚೀನಾ ಟಿಬೆಟ್ ಮೇಲೆ ಮಾಡಿದ ಆಕ್ರಮಣವನ್ನು ಶಿಶುಹತ್ಯೆಗೆ ಹೋಲಿಸುತ್ತಾ, ಚೀನಾ ಬಗ್ಗೆ ಭಾರತ ಎಚ್ಚರ ವಹಿಸಬೇಕೆಂದು ಸೂಚಿಸಿದರು.

ಭಾರತ, ಚೀನಾ ಗಡಿಗಳ ಇತಿಹಾಸವನ್ನು ಅಧ್ಯಯನ ಮಾಡಿದ್ದ ಲೋಹಿಯಾ ಗಡಿಗೆರೆ ಕುರಿತ ತಮ್ಮ ಗ್ರಹಿಕೆಗಳನ್ನು ದಾಖಲಿಸಿದರು:

'ಭಾರತ–ಚೀನಾಗಳ ಗಡಿಗಳನ್ನು ಬೇರ್ಪಡಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಎಳೆದಿರುವ ಮೆಕ್‌ಮೋಹನ್ ಗಡಿರೇಖೆ ಕರಾರುವಾಕ್ಕಾದ ಗಡಿ ರೇಖೆಯಲ್ಲ. ಕೈಲಾಸ ಪರ್ವತ, ಮಾನಸ ಸರೋವರ, ಉತ್ತರ ಬ್ರಹ್ಮಪುತ್ರಗಳೇ ಭಾರತದ ಗಡಿಗಳು. ಯಾರಾದರೂ ಈ ಗಡಿಯನ್ನು ಉಲ್ಲಂಘಿಸಿದರೆ ಅದು ಆಕ್ರಮಣ ಎಂದೇ ಭಾವಿಸಬೇಕು.'

ಭಾರತಕ್ಕೆ ಸ್ವಾತಂತ್ರ್ಯ ಬಂದ ಶುರುವಿನಲ್ಲೇ ಲೋಹಿಯಾ ನೀಡಿದ ಎಚ್ಚರಿಕೆಗಳನ್ನು ಭಾರತ ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ. 1954ರಲ್ಲಿ ಪಂಚಶೀಲ ತತ್ವಗಳಡಿ ಚೀನಾದ ಜೊತೆ ಭಾರತ ಶಾಂತಿ ಒಪ್ಪಂದ ಮಾಡಿಕೊಂಡಿತು. 'ಹಿಂದೀ, ಚೀನೀ ಭಾಯಿ ಭಾಯಿ' ಎಂಬ ಘೋಷಣೆಯನ್ನೂ ನೆಹರು ಜನಪ್ರಿಯಗೊಳಿಸಿದರು.

ಈ ಘಟ್ಟದಲ್ಲೂ ಲೋಹಿಯಾ ಚೀನಾ ಬಗ್ಗೆ ಎಚ್ಚರಿಸುತ್ತಲೇ ಇದ್ದರು. ಅದರ ಜೊತೆಗೆ, ಭಾರತೀಯರು ಹಿಮಾಲಯ ಕುರಿತ ಪುರಾಣ ಕಥನಗಳ ಮಂಪರಿನಿಂದ ಬಿಡಿಸಿಕೊಳ್ಳಬೇಕೆಂದು ಕೂಡ ಹೇಳುತ್ತಿದ್ದರು. ಹಿಮಾಲಯ ಕುರಿತ ಹಾಡೊಂದು ತಾರುಣ್ಯದಲ್ಲಿ ಲೋಹಿಯಾರನ್ನು ಪ್ರಭಾವಿಸಿತ್ತು. ಮುಂದೆ ಅವರು ಅದರಿಂದ ಪ್ರಜ್ಞಾಪೂರ್ವಕವಾಗಿಯೇ ಬಿಡಿಸಿಕೊಳ್ಳಬೇಕಾಯಿತು! ಇಂಥ ಪೌರಾಣಿಕ ಹಾಡುಗಳು ಹಿಮಾಲಯದ ಬಗೆಗೆ ಸೃಷ್ಟಿಸಿದ್ದ ಮುಗ್ಧ ನಂಬಿಕೆಗಳಿಂದ ಭಾರತೀಯರು ಹೊರಬರಬೇಕೆಂದು ಲೋಹಿಯಾ ಹೇಳುತ್ತಿದ್ದರು:

'ಹಿಮಾಲಯ ನಮ್ಮ ಪಾಲಿನ ರಕ್ಷಕ ಅಥವಾ ದೇಶವನ್ನು ಕಾಯುವ ಕಾವಲು ಸಿಪಾಯಿ ಎಂಬ ವಿಚಾರವನ್ನು ಮೊದಲು ನಮ್ಮ ತಲೆಯಿಂದ ತೆಗೆದು ಹಾಕಬೇಕು. ಹಿಮಾಲಯ ಪ್ರಪಂಚದಲ್ಲೇ ಅತ್ಯಂತ ಎತ್ತರದ ಪರ್ವತವೆನಿಸಿರುವುದರಿಂದ ಅದು ನಮ್ಮ ದೇಶವನ್ನು ಅಡ್ಡಗಟ್ಟಿ ನಿಂತು ಕಾಪಾಡುತ್ತದೆ ಎಂಬ ಭಾವನೆ ಬಹಳ ಮಂದಿ ಭಾರತೀಯರ ತಲೆಯಲ್ಲಿ ಬಹು ಹಿಂದಿನಿಂದಲೂ ನೆಲೆಸಿದೆ. ಆದರೆ ದೇಶ ಶಕ್ತಿಶಾಲಿಯಾಗಿದ್ದ ಕಾಲದಲ್ಲೂ ಎಂದೂ ಹಿಮಾಲಯ ಯಾವುದಕ್ಕೂ ಕಾವಲು ಸಿಪಾಯಿಯಾಗಿರಲಿಲ್ಲ.'

1961ರಲ್ಲಿ ಲೋಹಿಯಾ ಬದರಿನಾಥಕ್ಕೆ ಹೋದಾಗ ಕೈಲಾಸ ಮತ್ತು ಮಾನಸ ಸರೋವರದ ಸುತ್ತ ಚೀನಾ ಮೋಟಾರ್ ರಸ್ತೆಯನ್ನು ನಿರ್ಮಿಸಿರುವುದನ್ನೂ ಗಮನಿಸಿದರು. ಇಂಥ ಬೆಳವಣಿಗೆಗಳ ಜೊತೆಗೆ, ಲೋಹಿಯಾ ಇನ್ನೂ ಕೆಲವು ಸೂಕ್ಷ್ಮಗಳನ್ನು ಗಮನಿಸಿದರು: ಈ ಪ್ರದೇಶಗಳ ಕೆಲವು ಜನವರ್ಗದವರು ತಾವು ಮಂಗೋಲಿಯನ್ ಜನಾಂಗಕ್ಕೆ ಸೇರಿದವರು ಎಂಬ ಹುಸಿ ನಂಬಿಕೆಗೆ ಬಲಿಯಾಗಿಬಿಟ್ಟಿದ್ದರು. ಈ ನಂಬಿಕೆ ಈ ಜನರೊಡನೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳಲು ಚೀನಾಕ್ಕೆ ಅನುಕೂಲಕರವಾಗಿತ್ತು; ಮಂಗೋಲಿಯನ್ ಮೂಲ ಕುರಿತ ಈ ಜನರ ನಂಬಿಕೆಯನ್ನು ಚೀನಾ ತನಗೆ ಬೇಕಾದಂತೆ ಬಳಸಿಕೊಳ್ಳತೊಡಗಿತ್ತು.

ಈ ನಿಟ್ಟಿನಲ್ಲಿ ಲೋಹಿಯಾ ಭಾರತ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟರು:

1. ಭಾರತ ಸರ್ಕಾರ ಈ ಪ್ರದೇಶದ ಜನರನ್ನು ಹೆಚ್ಚು ಹೆಚ್ಚು ಒಳಗೊಳ್ಳಲು, ಹಿಮಾಲಯವನ್ನು ಹಾಗೂ ಅಲ್ಲಿನ ಜನತೆಯನ್ನು ರಕ್ಷಿಸಲು ಯೋಜನೆಗಳನ್ನು ರೂಪಿಸಬೇಕು. ರಾಷ್ಟ್ರೀಯ ಭಾವನೆಯನ್ನು ರೂಪಿಸಬೇಕು.

2.ಹಿಮಾಲಯ ಕುರಿತ ಪ್ರತ್ಯೇಕ ಸಚಿವ ಖಾತೆಯನ್ನು ಆರಂಭಿಸಬೇಕು.

3. ಹಿಮಾಲಯ ವ್ಯವಹಾರಗಳ ವಿಭಾಗ ವಿದೇಶಾಂಗ ಸಚಿವಾಲಯದಲ್ಲಿರಬಾರದು; ಅದು ಗೃಹ ಸಚಿವಾಲಯದಲ್ಲಿ ಅಥವಾ ಪ್ರಧಾನಮಂತ್ರಿಯವರ ಉಸ್ತುವಾರಿಯಲ್ಲಿರಬೇಕು.

4. ಈ ಪ್ರದೇಶಗಳಿಗೆ NEFA ಎಂಬ ಬ್ರಿಟಿಷ್ ಆಡಳಿತ ಕಾಲದ ಹೆಸರಿನ ಬಳಕೆಯನ್ನು ನಿಲ್ಲಿಸಬೇಕು. ಬದಲಿಗೆ, 'ಊರ್ವಶೀಯಂ' ಎಂಬ ಪರಿಚಿತ, ಸ್ಥಳೀಯ ಹೆಸರನ್ನೇ ಅಧಿಕೃತ ದಾಖಲೆಗಳಲ್ಲೂ ಬಳಸಬೇಕು.

ಸಮಾಜವಾದಿ ಪಕ್ಷ 1947ರಿಂದಲೂ ಹಿಮಾಲಯ ಕಾರ್ಯನೀತಿಯ ಬಗ್ಗೆ ಚರ್ಚಿಸುತ್ತಿತ್ತು. ಜವಾಬ್ದಾರಿಯುತ ರಾಜಕೀಯ ಪಕ್ಷವೊಂದು ದೇಶದ ಹಲವು ಸಮಸ್ಯೆಗಳ ಬಗ್ಗೆ ಹಲವು ದಿಕ್ಕುಗಳಿಂದ ಚಿಂತಿಸಬೇಕು ಎಂದು ಲೋಹಿಯಾ ನಂಬಿದ್ದರು. ಈ ದೃಷ್ಟಿಯಿಂದ ಹಿಮಾಲಯದ ಸುತ್ತಮುತ್ತಲ ಪ್ರದೇಶಗಳನ್ನು ಹಲವು ಮಗ್ಗಲುಗಳಿಂದ ಅಧ್ಯಯನ ಮಾಡಿದ್ದರು.

ಈ ಸುಂದರ ಪ್ರದೇಶದ ಸಮಸ್ಯೆಗಳಿಗೆ ರಾಜಕೀಯ ಪರಿಹಾರಗಳನ್ನು ಹುಡುಕುವ ಅಡ್ಡಾಟದ ನಡುವೆ ಲೋಹಿಯಾರ ಸೌಂದರ್ಯಾನ್ವೇಷಕ ಪ್ರಜ್ಞೆ ಕೂಡ ಜಾಗೃತವಾಗಿಯೇ ಇತ್ತು! ಹಿಮಾಲಯ ಕುರಿತ ಲೋಹಿಯಾ ಬರವಣಿಗೆಗಳಲ್ಲಿ ಅವರ ಹುಡುಕಾಟಗಳ ಈ ಕೋಮಲ ಮುಖವೂ ದಾಖಲಾಗಿದೆ:

'ನಾನು ಬದರೀನಾಥದಿಂದ ಹಿಂದಿರುಗಿ ಬರುತ್ತಿದ್ದಾಗ ನನ್ನ ಪಕ್ಕದಲ್ಲಿ ಒಬ್ಬ ತಾಲಚಾ ಅಥವಾ ಮಾಲಚಾ ಹುಡುಗಿ ವೇಗವಾಗಿ ಸಾಗಿ ಹೋದಳು. 'ರ್‍' ಎಂದು ಸದ್ದಾದಾಗ ನಾನು ತಿರುಗಿ ನೋಡಿದೆ; ಅವಳ ಮುಖ ನೋಡುವಷ್ಟರಲ್ಲಿ ಅವಳು ಮಾರು ದೂರ ಹೋಗಿದ್ದಳು. ಅವಳು ಎರಡೂ ಕೈಗಳನ್ನು ಸೇರಿಸಿ ಬೆನ್ನ ಹಿಂದೆ ಹಿಡಿದುಕೊಂಡು ಸ್ವಲ್ಪ ಬಾಗಿ ಎಷ್ಟು ಬೇಗಬೇಗ ಹೋಗುತ್ತಿದ್ದಳೆಂದರೆ, ಬಯಲು ಪ್ರದೇಶದಲ್ಲಿ ದಷ್ಟಪುಷ್ಟ ಯುವಕನಿಗೆ ಕೂಡ ಅಷ್ಟು ವೇಗವಾಗಿ ಹೋಗಲು ಸಾಧ್ಯವಾಗಲಾರದು ಎನ್ನಿಸಿತು.